# ಕೃಷಿಭೂಮಿಯ ಪರಭಾರೆ

ಮರ, ಗಿಡ, ಬಳ್ಳಿ, ಅಡಿಕೆ, ತೆಂಗು, ಭತ್ತ ಎಲ್ಲವನ್ನೂ ಕಳಚಿಕೊಂಡು ಬಯಲಾಗಿ, ಕೆಂಪು ಮಣ್ಣು ತುಂಬಿಕೊಂಡು ಮಟ್ಟಸವಾಗಿ ತುಂಡು ತುಂಡು ಬೇಲಿ ಹಾಕಲ್ಪಟ್ಟು 'ಮಾರಾಟಕ್ಕಿದೆ' ಎಂಬ ಬೋರ್ಡು ನೆಟ್ಟು ಕಾಯುವ ಮಾರಾಟಕಾರ್ಯ ಎಲ್ಲೆಡೆ ನಡೆಯುತ್ತಿದೆ. ಕೈಗಾರಿಕೆ, ಕಾರ್ಖಾನೆ, ಉದ್ದಿಮೆ, ವಿಶೇಷ ವಲಯಗಳೆಂದು ಭೂಮಿಯನ್ನು ಸರ್ಕಾರವೇ ಖರೀದಿಸುವುದು, ಕಾದಿರಿಸುವುದು ಬೇರೆ; ಖಾಸಗಿ ಶ್ರೀಮಂತರು ಖರೀದಿಸಿ ಪರಿವರ್ತಿಸಿ ಮಾರಾಟಕ್ಕೆ ಅಣಿಗೊಳಿಸುವುದು ಬೇರೆ. ಮಲೆನಾಡು–ಕರಾವಳಿ, ಅರೆ ಬಯಲು ಸೀಮೆಗಳಲ್ಲಿ ಈ ಮೇಲಿನ ಮೊದಲ ಉದ್ದೇಶಕ್ಕೆ ಎಷ್ಟೋ ರೈತರು ತಮ್ಮ ತುಂಡು ಭೂಮಿಯನ್ನು ಕಳೆದುಕೊಂಡರೆ ಬೇರೆ ಕಡೆ ಎರಡನೆಯ ಉದ್ದೇಶದಿಂದ ಭೂಮಿ ಪರಭಾರೆಗೊಳ್ಳುತ್ತಿದೆ.

ಈ ಭೂಪರಿವರ್ತನೆ, ಮಾರಾಟ ಏಕಮುಖ ಅಲ್ಲವೇ ಅಲ್ಲ, ಇಲ್ಲಿ ಮಾರಾಟಗಾರನ ಆಸಕ್ತಿಯೂ ಮುಖ್ಯವಾಗುತ್ತಿದೆ. ವಿರೋಧಿಸುವ ಒಬ್ಬ ಸದಸ್ಯನನ್ನು ಕುಟುಂಬದ ಉಳಿದವರೆಲ್ಲರೂ ಒಪ್ಪಿಸಿ, ಒತ್ತಡ ತಂದು ಸಹಿ ಹಾಕಿಸಿ ಪರಭಾರೆ ಮಾಡುವ ಕ್ರಿಯೆ ನಡೆಯುತ್ತಿದೆ. ಈಗ ಬಹುಪಾಲು ರೈತರು ಹೇಳುತ್ತಿರುವ 'ಕೃಷಿ ಸುಖವಿಲ್ಲ' ಎಂಬ ವೈರಾಗ್ಯದ ಮಾತು ಕೇವಲ ಕೃತಕ. ಉದ್ದೇಶಪೂರ್ವಕವಾಗಿದ್ದು ಅದು ಭೂಮಿ ಮಾರಾಟ ಮಾಡಲು ಅವರು ಮಾನಸಿಕವಾಗಿ ತಯಾರಾಗುತ್ತಿರುವ ಸ್ಥಿತಿಯೇ ಆಗಿದೆ. ಭೂಮಿ ಪಾಲಾಗದೆ ಹರಿದು ಹಂಚಿಹೋದ ಕುಟುಂಬದ ಸದಸ್ಯರಿಗೂ ಅವರು ಅದನ್ನೇ ಹೇಳಿ ಹೇಳಿ ಮಾನಸಿಕವಾಗಿ ಮಾರಾಟಕ್ಕೆ ಸಿದ್ಧಗೊಳಿಸುತ್ತಾರೆ.

ಭೂ ಪರಿವರ್ತನೆ–ಮಾರಾಟ ಕೃಷಿ ನಾಶಕ್ಕೆ ಮುಖ್ಯ ಕಾರಣಗಳಲ್ಲೊಂದು. ಖರೀದಿಸುವಾಗ ಕೃಷಿ ಭೂಮಿಯ ಎಕರೆಗಿದ್ದ ಬೆಲೆ ಪರಿವರ್ತನೆಯಾದ ಮೇಲೆ ಸೆಂಟ್ಸ್‌ಗೆ ಬರುತ್ತದೆ. ಅದು ಡಿಕ್ಲರೇಷನ್, ಅಕ್ರಮ ಸಕ್ರಮ, ದರ್ಖಾಸ್ತು, ಗೇಣಿಚೀಟಿ, ಒಪ್ಪಂದ ಯಾವ ಸ್ವರೂಪದಲ್ಲೇ ಇರಲಿ, ದಲ್ಲಾಳಿಗಳು ರಂಗೋಲಿಯಡಿಯಲ್ಲಿ ತೂರಿ ಭೂಮಿಯನ್ನು ಪರಿವರ್ತಿಸಿ ಮಾರಾಟಕ್ಕಿಳಿಯುತ್ತಾರೆ. ಈ ದಂಧೆ ನಾಗರಿಕ ಜಗತ್ತಿನಿಂದ ದೂರವಿರುವ ಕುಗ್ರಾಮ, ತೀರಾ ದೂರದ ಹಳ್ಳಿಗಳಿಗೆ ಇನ್ನೂ ಇಳಿದಿಲ್ಲ. ಹೆದ್ದಾರಿ ಮತ್ತು ನಗರ, ಮಹಾನಗರ ವ್ಯಾಪ್ತಿಯೇ ಮಾನದಂಡವಾಗಿ ಎಗ್ಗಿಲ್ಲದೆ ನಡೆಯುತ್ತಿದೆ. ಅಷ್ಟರ ಮಟ್ಟಿಗೆ ಕುಗ್ರಾಮದ ಜನ, ಅಲ್ಲಿಯ ಕೃಷಿ ಕ್ಷೇಮ ಎನ್ನುವಂತಿಲ್ಲ. ಆ ವಲಯದವರು 'ತಮ್ಮ ಭೂಮಿಗೆ ಬೇಡಿಕೆ ಇಲ್ಲವಲ್ಲ' ಎಂದು ಪರಿತಪಿಸುವ ರೀತಿ ನೋಡಿದರೆ ಸಮಸ್ಯೆ ಬಹಳ ದೂರವಿಲ್ಲ. ಒಳ್ಳೆಯ ಕಾಲ ನಮಗೂ ಬಂದೇ ಬರುತ್ತದೆ, ಬರಲಿ ಎಂದವರು ಕಾಯುತ್ತಿದ್ದಾರೆ.

ಕಾನೂನುಗಳಿಂದ ಕೃಷಿಯನ್ನು ಕಡ್ಡಾಯಗೊಳಿಸುವುದು, ಭತ್ತದ ಕೃಷಿಗೆ ಸಬ್ಸಿಡಿ ನೀಡುವುದು, ನೀರಾವರಿಗೆ ಸಬ್ಸಿಡಿ, ಗೊಬ್ಬರ ಬೀಜಗಳಿಗೆ ಸಬ್ಸಿಡಿ, ಭೂ ನಿಯಮಗಳನ್ನು ರೈತಪರಗೊಳಿಸುವುದು – ಇದೆಲ್ಲಾ ತತ್ಕಾಲೀನ ತಡಗಳೇ ಹೊರತು ಶಾಶ್ವತ ಪರಿಹಾರಗಳಲ್ಲ. ಕೃಷಿ ನೆಲದ ಸಂಬಂಧವೇ ಇಲ್ಲದೆ ಬರೀ ಅನ್ನ ತಿನ್ನುವವ, ಕೃಷಿಯಲ್ಲಿದ್ದು ವಲಸೆ ಹೋದವ, ಈಗ ಕೃಷಿಯಲ್ಲೇ ಉಳಿದವ, ಇದಕ್ಕೆಲ್ಲಾ ಭಿನ್ನ ಭಿನ್ನವಾಗಿ ಪ್ರತಿಕ್ರಿಯಿಸುತ್ತಾನೆ. ಮೊದಲನೆಯ ಎರಡು ವರ್ಗದವರಿಗೆ ಇದು ಅಹಿತ, ಕಾನೂನಿನ ದುರುಪಯೋಗ ಅನ್ನಿಸುತ್ತದೆ. ಕೃಷಿಕ ಅನ್ನದಾತ, ಆತ ಉಳಿಯಬೇಕು, ಆತ ಕೃಷಿ ಮಾಡುತ್ತಲೇ ಇರಬೇಕು, ಆತ ದೇಶದ ಬೆನ್ನೆಲುಬು, ದೇಶಭೂಷಣ ಎಂದೆನಿಸುತ್ತದೆ. ಕೃಷಿಕ ಹಾಗಲ್ಲ, ಅವನಿಗೆ ತನ್ನ ಭೂಮಿ, ಗದ್ದೆ, ಅನ್ನ ಕಾಣಿಸುವುದಿಲ್ಲ. ಬದಲಾಗಿ ಅವನಿಗೆ ಕಾಣಿಸುವುದು ಕೃಷಿ, ಊರು ಬಿಟ್ಟು ಸುಖವಾಗಿರುವ ಮೊದಲನೆಯ ಎರಡು ವರ್ಗ. ಪೇಟೆಯಲ್ಲಿರುವ ಅವರ ಮನೆಯ ಮುಂದೆ ನಿಂತಿರುವ ಹೊಸ ಕಾರು, ಟೈಕಟ್ಟಿಕೊಂಡು ಶಾಲೆಗೆ ಹೋಗುವ ಅವರ ಮಕ್ಕಳು, ಅಲ್ಲಿಗೆ ತಾಗುವ ಮೊಬೈಲ್‌ರೇಂಜು ಹೀಗೆ. ಹೀಗಿರುವಾಗ ಭೂ ಸುಧಾರಣೆಯ ಕಾನೂನುಗಳು, ರೈತಪರ ಸರಕಾರದ ಸಾಲಮನ್ನಾ, ಸಬ್ಸಿಡಿ ಯೋಜನೆಗಳು ರೈತಸಂಘದ ಪದಾಧಿಕಾರಿಗಳನ್ನು, ಪರಿಸರವಾದಿಗಳನ್ನು, ವಿಶ್ವವಿದ್ಯಾಲಯದ ಪ್ರಗತಿಪರರನ್ನು ತಾಗಿದಷ್ಟು ನಿಜವಾಗಿಯೂ ನೆಲದಲ್ಲಿ ನಿಂತು 'ಕೃಷಿ ಸುಖವಿಲ್ಲ' ಎನ್ನುವ ರೈತರಿಗೆ ತಾಗುವುದಿಲ್ಲ. ಯಾಕೆಂದರೆ ಅವರ ಮನಸ್ಸಿನೊಳಗೆ ಯಾರೂ ಊಹಿಸದ ಬೇರೇನೋ ಇದೆ.

## ನಿಮ್ಮ ಆಹಾರದಲ್ಲಿ ವಿಷವಿದೆಯೆ?

– ಹೀಗೆ ಕೃಷಿಯಲ್ಲಿ ಅನೇಕ ಹೊಸತು ಪ್ರಯೋಗಗಳಾಗುತ್ತಿರುವ ಸಂದರ್ಭವಿದು. ಕೃತಕ ಚೋದಕಗಳ ಅನಿವಾರ್ಯತೆಯನ್ನು ಕೃಷಿ ಸ್ವೀಕರಿಸಿ ಶತಮಾನವೇ ಆಯಿತು. ಅಮೆರಿಕ, ಚೀನಾ, ಇಸ್ರೇಲ್ ದೇಶಗಳೇ ಇವುಗಳನ್ನು ಸ್ವೀಕರಿಸಿ ಅನುಸರಿಸಿವೆ. ಆದರೆ ಅಲ್ಲೆಲ್ಲಾ ಕಟ್ಟುನಿಟ್ಟಾದ ಕಾನೂನು, ಶಿಕ್ಷೆಯಿದೆ. ಪರೀಕ್ಷೆಗಳಿವೆ. ಅನ್ನ, ಆಹಾರ ಭಾರತದಲ್ಲಾದಂತೆ ವಿಷದಲ್ಲಿ ಮಿಂದೆದ್ದು ಬರುವಂತಿಲ್ಲ. ಯಾವುದೇ ಕಾರಣಕ್ಕೂ ವಿಷದ ಶೇಷಾಂಶ ಪ್ರತಿ ಕೆ.ಜಿ. ಅಕ್ಕಿಯಲ್ಲಿ 0.01 ಮಿಲಿಗ್ರಾಂಗಿಂತ ಹೆಚ್ಚಾಗಬಾರದು. ಇದು ಗೋಧಿ, ಜೋಳ, ರಾಗಿ ಎಲ್ಲಕ್ಕೂ ಅನ್ವಯ. ಭಾರತದಲ್ಲಿ ಈ ಪ್ರಮಾಣ ಎಲ್ಲದರಲ್ಲೂ ಹೆಚ್ಚೇ ಇದೆ. ಈ ಕಾರಣಕ್ಕಾಗಿಯೇ ನಮ್ಮ ಅಕ್ಕಿ, ಮೆಣಸು, ಕಾಳುಮೆಣಸು, ಮಾವು, ಬಾಳೆ, ಆಗಾಗ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಿರಸ್ಕಾರಕ್ಕೆ ಒಳಗಾಗುತ್ತವೆ.

ಜೀವಮಾನದಲ್ಲಿ ಒಮ್ಮೆಯೂ ಹಳ್ಳಿ, ಹೊಲಗದ್ದೆ, ಬೆಳೆ ಬದುಕನ್ನು ನೋಡದ ನಗರಕೇಂದ್ರಿತ ಶ್ರೀಮಂತವರ್ಗ ಹಸಿರಾಗಿರುವುದೆಲ್ಲಾ ತರಕಾರಿ ಎಂದು ಭ್ರಮಿಸಿ ಖರೀದಿಸುವುದು ನಮಗೆ ಗೊತ್ತೇ ಇದೆ. ಇಂಥವರು ವಿಷವಿಲ್ಲದ ಸಾವಯವ ತರಕಾರಿ, ಆ ಅಂಗಡಿಯ ಬೋರ್ಡು ಮತ್ತು ಅವರು ಕೊಡುವ ಕರಪತ್ರದ ಮೇಲೆ ಇರುತ್ತದೆ ಎಂದು ನಂಬುತ್ತಾರೆಯೇ ಹೊರತು ತರಕಾರಿಯಲ್ಲಿ ಇದೆಯೋ ಇಲ್ಲವೋ ಎಂಬ ನಿಖರತೆ ಗೊತ್ತಿರುವುದಿಲ್ಲ. ತಾವು ಖರೀದಿಸುವ ಐದು ರೂಪಾಯಿ ಕೊತ್ತಂಬರಿ ಸೊಪ್ಪಿನಲ್ಲಿ ಎಷ್ಟು ವಿಷವಿದೆ ಎಂದು ಅವರ ಕಣ್ಣೆದುರೇ ಅಳೆದು ಸುರಿಯುವ ಯಾವ ಮಾಪನವೂ ಭಾರತೀಯ ಅಂಗಡಿಗಳಲ್ಲಿ, ಬಳಕೆದಾರರಲ್ಲಿ ಇರುವುದಿಲ್ಲ.




ಬಹುಪಾಲು ಸಾವಯವ ಅಂಗಡಿಗಳು ಇಂದು ಮಧ್ಯವರ್ತಿಗಳ ಕೈಯಲ್ಲಿವೆ. ಸಾವಯವವೇ ಎನ್ನಲು ಅದನ್ನು ಬೆಳೆದ ರೈತ ಅಲ್ಲಿರಲಾರ. ಪೇಟೆಯ ಮಂದಿ, ಮಾಜಿ ರೈತ, ಹಣ ಪ್ರೀತಿಯ ಮಾರಾಟಗಾರ ಅಲ್ಲಿ ಕೂತಿರುತ್ತಾರೆ. ಬೆಳೆಗಾರ ಅಲ್ಲಿರದೆ ಅವನ ಬಹುದೂರದ ಹೊಲ ತೋಟದಿಂದ ಖರೀದಿಸಿದ ವಸ್ತುಗಳು ಇರುತ್ತವೆ. ಬಳಕೆದಾರನಿಗೆ ರೈತ ಕಾಣಿಸದೇ ಇರುವುದು ಅಥವಾ ಕಾಣದಂತೆ ಮಾಡುವುದು ಅಲ್ಲಿಯ ತಂತ್ರವೇ ಆಗಿದೆ. ಮಾಲು ಮತ್ತು ಅದನ್ನು ಬೆಳೆದ ಕ್ರಮ, ಶ್ರಮ, ಸಾಚಾತನದ ವಿವರಗಳು ಇಲ್ಲಿ ಅದಲುಬದಲಾಗುವುದಿಲ್ಲ. ವಸ್ತು ಮಾತ್ರ ಕೈ ಬದಲಾಗುತ್ತದೆಯೇ ಹೊರತು ಅದರ ಹುಟ್ಟುವಳಿ ಕ್ರಮ ಪರಭಾರೆಯಾಗುವುದಿಲ್ಲ. ಸಾವಯವ ಮಾರುಕಟ್ಟೆ ಒಂದೇ ಅಲ್ಲ, ಇಡೀ ಭಾರತೀಯ ಕೃಷಿ ಮಾರುಕಟ್ಟೆ ವ್ಯವಸ್ಥೆಯೇ ಇಲ್ಲಿಯ ರೈತರನ್ನು ನಿರಂತರ ನೇಪಥ್ಯದಲ್ಲಿಟ್ಟಿದೆ.

ಸಾವಯವದ ಇಡೀ ಯಶಸ್ಸು ಇರುವುದು ಅದನ್ನು ಬೆಳೆದಾತ ಬಳಕೆದಾರನಿಗೆ ಮುಖಾಮುಖಿಯಾಗುವುದರಲ್ಲಿ. ಇಲ್ಲಿ ವಸ್ತುವಿನ ರೂಪ, ಬೆಲೆ ಮಾತ್ರ ಯಾವತ್ತೂ ಮೌಲ್ಯ ನಿರ್ಧಾರದ ಮಾನದಂಡವಲ್ಲ. ನಿರ್ವಿಷದ ಪ್ರಮಾಣವೂ ಬೆಲೆಗಿಂತ ಮುಖ್ಯವಾಗುವುದರಿಂದ ರೈತನ ಉಪಸ್ಥಿತಿ, ಲಭ್ಯತೆ ಬಹಳ ಮುಖ್ಯ.